ಮಾಡಿದ ಹಾಗೂ ಆ ನವಜಾತ ಶಿಶುವಿನ ಪುರುಷ ತಂದೆ ಯಾರು, ಅವನೆಲ್ಲಿದ್ದಾನೆ ಅಥವಾ ಅವನನ್ನು ಹುಡುಕಿ ಶಿಕ್ಷಿಸಬೇಕು, ಅವನು ಆ ಕುಮಾರಿಯನ್ನು ಗರ್ಭಿಣಿ ಮಾಡಿ ತ್ಯಜಿಸಿದ್ದಾನೆ ಎಂದು ಒಂದು ಸಾಲನ್ನು ಸಹ ಬರೆಯಲಾಗುವುದಿಲ್ಲ. ಯಾರೂ ಈ ಬಗ್ಗೆ ಯೋಚಿಸುವುದಿಲ್ಲ. ಅಲ್ಲ, ಹುಡುಗಿ ಒಬ್ಬಳೇ ಸೆಕ್ಸ್ ಮಾಡುವಳೇ? ಪುರುಷನ ಶುಕ್ರಾಣುಗಳ ಪಾತ್ರವಿರುವುದಿಲ್ಲವೇ?' ನಾನು ಭಾವಾವೇಶದಲ್ಲಿ ಹೇಳುತ್ತಲೇ ಇದ್ದೆ.

'ನೀವು ಹೇಳ್ತಿರುವುದು ನಿಜ', ವಿಶಾಲ ಮತ್ತೊಮ್ಮೆ ನನ್ನ ಮಾತನ್ನು ಸಮರ್ಥಿಸಿದ.

'ಹೆಣ್ಣು ಬಯಸದೆ ಇದ್ದರೂ ಅವಳೊಂದಿಗೆ ಸಂಬಂಧ ಬೆಳೆಸಲಾಗುತ್ತದೆ, ಆದರೆ ಪುರುಷ ಬಯಸದಿದ್ದರೆ, ಮಹಿಳೆ ಎಷ್ಟೇ ಪ್ರಯತ್ನಿಸಿದರೂ ಅವಳು ಪುರುಷನಿಗೆ ಏನೂ ಮಾಡಲಾರಳು. ಪ್ರಕೃತಿಯೇ ಈ ವ್ಯವಸ್ಥೆಯನ್ನು ಮಾಡಿದೆ. ಆದರೂ ಮಹಿಳೆಯನ್ನೇ ದೋಷಿ ಎನ್ನಲಾಗುತ್ತದೆ...' ನಾನು ಮೈಮರೆತು ಸತ್ಯವನ್ನೇ ಹೇಳಿದೆ. ವಿಶಾಲ್ ಸಹ ಕೆಲವು ಕ್ಷಣ ನೆಲವನ್ನು ನೋಡುತ್ತಾ ಕೂತಿದ್ದ.

'ಹೌದು, ನಮ್ಮ ಸಮಾಜದಲ್ಲಿ ದ್ವಿಮುಖತನವಿದೆ', ವಿಶಾಲ್ ಮತ್ತೆ ಚರ್ಚೆಯ ಸೂತ್ರವನ್ನು ಹಿಡಿದ.

'ನಾವು ಪ್ರತಿಯೊಂದರಲ್ಲೂ ದ್ವಿಮುಖತನವನ್ನು ತೋರುತ್ತೇವೆ', ಮತ್ತೊಮ್ಮೆ ನನ್ನ ಮನಸ್ಸು ನನ್ನ ಚಿಂತನೆಯ ಪದರುಗಳನ್ನು ಬಿಚ್ಚಲಾರಂಭಿಸಿತು. ಬಹುಶಃ ಮಧ್ಯಾಹ್ನದ ಘಟನೆಯು ನನ್ನಲ್ಲಿ ವಿದ್ರೋಹದ ಭಾವನೆಯನ್ನು ಹುಟ್ಟಿಸಿತ್ತು.

'ಇದು ದ್ವಿಮುಖತನವಲ್ಲದೆ ಬೇರೇನು? ಒಂದೆಡೆ ನಾವು ವಯಸ್ಸಿಗೆ ಬರದ ಕನ್ಯೆಯರಿಗೂ ಶಿವಲಿಂಗಪೂಜೆ ಮಾಡಲು ಸಾರ್ವಜನಿಕವಾಗಿ ಅನುಮತಿಯನ್ನು ಕೊಡುತ್ತೇವೆ; ಇನ್ನೊಂದಡೆ ಶಾಲೆಗಳಲ್ಲಿ 'ಸೆಕ್ಸ್ ಎಜುಕೇಶನ್' ಬಗ್ಗೆ ರಂಪಾಟವನ್ನೇ ಮಾಡುತ್ತೇವೆ. ನಾವು ಒಂದೆಡೆ ರಾಧಾ ಕೃಷ್ಣರನ್ನು ಪೂಜಿಸುತ್ತೇವೆ, ಅವರನ್ನು ಆರಾಧ್ಯ ದೇವರೆಂದು ತಿಳಿಯುತ್ತೇವೆ, ಆದರೆ ವಿವಾಹಿತ ಮಹಿಳೆಯೊಬ್ಬಳು ಬೇರೆ ಪುರುಷನೊಂದಿಗೆ ಓಡಾಡಿದರೆ ಅವಳನ್ನು ನೀತಿಗೆಟ್ಟವಳು ಎನ್ನುತ್ತೇವೆ'.

'ಧಾರ್ಮಿಕ ಉದಾಹರಣೆಗಳ ಬಗ್ಗೆ ಮಾತನಾಡುವುದು ಸಹ ಅಪರಾಧ. ನಾವು ನಮ್ಮನ್ನು ಧರ್ಮನಿರಪೇಕ್ಷ ಎಂದುಕೊಳ್ಳುತ್ತೇವೆ, ಆದರೆ ವಾಸ್ತವಿಕವಾಗಿ ಅಲ್ಲ! ಹೋಗಲಿ ಬಿಡಿ...' ಎಂದ ವಿಶಾಲ್.

ಇಂಥ ಚರ್ಚೆಗಳು ನನ್ನ ಮತ್ತು ರಿತಿಕ್‌ನ ಮಧ್ಯೆ ನಡೆಯುತ್ತಿದ್ದವು, ಇಂಥ ಚರ್ಚೆಯಲ್ಲಿ ಅವನು ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದ. ಆದರೆ ವಿಶಾಲ್ ಈ ಭಾರದ ಚರ್ಚೆಯಿಂದ ಬಹುಶಃ ದಣಿಯುತ್ತಿದ್ದ ಅಥವಾ ಅವನು ಧರ್ಮದ ವಿಷಯದಲ್ಲಿ ಚರ್ಚಿಸಲು ಬಯಸುತ್ತಿರಲಿಲ್ಲ.

'ಇವತ್ತು ನೀವು ಯಾವುದೋ ಚಿಂತೆಯಲ್ಲಿದ್ದೀರಾ?' ವಿಶಾಲ್ ಈ ಪ್ರಶ್ನೆ ಮಾಡಿ ನನ್ನನ್ನು ಆಶ್ಚರ್ಯಗೊಳಿಸಿದ. ಇವನು ನನ್ನ ಕಚೇರಿಯ ಗೂಢಚಾರನೇ? ನಾನಿವತ್ತು ಚಿಂತೆಯಲ್ಲಿದ್ದೆ



## ಕಳೆದ ಸಂಚಿಕೆಯಲ್ಲಿ

ಹೆಣ್ಣಿನ ಶಕ್ತಿಯ ಬಗ್ಗೆ ಇರುವ ಶಾಂಡಿಲಿ ಕಥೆಯನ್ನು ವಿಶಾಲ್ ವಿವರಿಸಿದ. ಈ ಕಥೆಯ ಬಗ್ಗೆ ಅಭಿಪ್ರಾಯವನ್ನು ಸುಗಂಧಾಳಲ್ಲಿ ಕೇಳಿದ. ಆಗ ಅವಳು, ಇದು ವ್ಯರ್ಥದ ಕಥೆ ಎನ್ನುತ್ತಾಳೆ. ರಿತಿಕ್, ಋಷಭ್ ಹಾಗೂ ವಿಶಾಲ್‌ನ ಸ್ವಭಾವಗಳನ್ನು ತುಲನಾತ್ಮಕವಾಗಿ ನೋಡುತ್ತಿದ್ದಳು ಸುಗಂಧಾ. ಒಮ್ಮೆ ವಿಶಾಲ್, ಸುಗಂಧಾ ಮನೆಗೆ ಬರುವ ಇಂಗಿತ ವ್ಯಕ್ತಪಡಿಸಿದಾಗ ಸುಗಂಧಾ ಒಪ್ಪಿಗೆ ಸೂಚಿಸುತ್ತಾಳೆ. ಅದರಂತೆ ವಿಶಾಲ್ ಸುಗಂಧಾ ಮನೆಗೆ ಬಂದು ಹಲವು ವಿಚಾರಗಳನ್ನು ಚರ್ಚಿಸುತ್ತಾರೆ. ಅಮ್ಮನಿಗೆ ಆರೋಗ್ಯ ಹದಗೆಡುತ್ತದೆ. ಕೀರ್ತಿ ಜೊತೆಯೂ ಕೆಲದಿನ ಕಳೆದ ಹಿನ್ನೆಲೆಯಲ್ಲಿ ಈಕೆಗೆ ವಿಶಾಲ್‌ನನ್ನು ಭೇಟಿಯಾಗಲು ಸಾಧ್ಯವಾಗುವುದಿಲ್ಲ. ಈ ಮಧ್ಯೆ ರಿತಿಕ್ ಮದುವೆಯಾಗಿರುವ ವಿಷಯವನ್ನು ಕೀರ್ತಿ ಸುಗಂಧಾಗೆ ತಿಳಿಸುತ್ತಾಳೆ. ಕೀರ್ತಿಯೊಂದಿಗೆ ಮಾತುಕತೆ ನಡೆಯುತ್ತದೆ. ಬಳಿಕ ಅವಳು ಜಬಲಪುರಕ್ಕೆ ಹೋಗುತ್ತಾಳೆ. ಇದೇ ಸಂದರ್ಭದಲ್ಲಿ ರಿತಿಕ್ ಪ್ರತ್ಯಕ್ಷನಾಗುತ್ತಾನೆ.

ಎಂಬುದು ಇವನಿಗೆ ಹೇಗೆ ತಿಳಿಯಿತು?

'ನಾನು ಚಿಂತೆಯಲ್ಲಿ? ನಿಮಗೆ ಹೀಗೇಕೆ ಅನ್ನಿಸಿತು?' ಕೇಳಿದೆ.

'ಹೀಗೇ'

'ಕೇಳಲು ಯಾವುದಾದ್ರು ಕಾರಣವಿರಬೇಕಲ್ಲ?'

'ವಿಶೇಷ ಕಾರಣ ಏನಿಲ್ಲ, ಸಂಜೆ ನಿಮ್ಮ ಫೋನ್ ಬಂದಾಗ, ನಿಮ್ಮ ಧ್ವನಿಯಿಂದ ನೀವೇನೋ ಚಿಂತೆಯಲ್ಲಿದ್ದೀರ ಎಂದು ಅನ್ನಿಸಿತು. ನಾನು ಆ ಕೂಡಲೇ ನಿಮ್ಮ ಬಳಿಗೆ ಬರಲು ಬಯಸುತ್ತಿದ್ದೆ, ಆದ್ರೆ ಲೆಡ್ಜರ್‌ನಲ್ಲಿ ಒಂದು ಸಮಸ್ಯೆ ಎದುರಾಗಿತ್ತು, ಅದನ್ನು ಬಗೆಹರಿಸಲೇಬೇಕಿತ್ತು, ಇಲ್ಲದಿದ್ದರೆ ಸಾವಿರಾರು ರೂಪಾಯಿಗಳು ನಷ್ಟವಾಗುತ್ತಿತ್ತು' ಎಂದ ವಿಶಾಲ್.

'ನಿಮ್ಮ ಕೆಲಸ ಸಹ ಅಪಾಯದ್ದು. ಹಣದ ವಿಚಾರದಲ್ಲಿ ಸ್ವಲ್ಪ ದಿಕ್ಕು ತಪ್ಪಿದರೂ ಕಷ್ಟ'

'ರೈಟ್! ಅವನು ಇನ್ನೂ ಹುಡುಗ, ತರಬೇತಿಗೆ ಬಂದವನು, ಸಾಮಾನ್ಯವಾಗಿ ತಪ್ಪು ಮಾಡ್ತಿರ್ತಾನೆ... ಎಲ್ಲಾ ಸರಿ ತಾನೇ? ಏನಾದ್ರು ಟೆನ್ಶನ್?' ವಿಶಾಲ್ ಮತ್ತೆ ಕೇಳಿದ.

'ಆಲ್ ರೈಟ್, ಎಲ್ಲಾ ಸರಿಯಾಗಿದೆ. ನೀವು ನಿನ್ನೆ ಬಂದಿರಲಿಲ್ಲ, ಅದಕ್ಕೇ ನಿಮ್ಮ ಕ್ಷೇಮ ಸಮಾಚಾರ ಕೇಳಲು ಬಯಸಿದೆ'. ನಾನು ವಿಶಾಲ್‌ಗೆ ರಿತಿಕ್‌ನ ಅಶಿಷ್ಟತೆಯ ಬಗ್ಗೆ ಹೇಳಲು ಬಯಸುತ್ತಿರಲಿಲ್ಲ. ಇಲ್ಲದಿದ್ದಲ್ಲಿ ವಿಶಾಲ್, 'ಅವನ್ಯಾರು? ಅವನಿಗೇಕೆ ಹಣ ಕೊಟ್ಟಿರಿ? ಪತ್ರ ಬರೆಸಿಕೊಂಡಿದ್ದೀರೋ, ಇಲ್ಲವೋ?' ಎಂದು ಅನೇಕ ಪ್ರಶ್ನೆಗಳನ್ನು ಕೇಳುತ್ತಾನೆ. ನಾಳೆ ಬ್ಯಾಂಕಿಗೆ ಹಣ ಜಮಾ ಮಾಡಲು ಹೋದಾಗ, ಒಂದು ಲಕ್ಷ ರೂಪಾಯಿಗಳು ಎಲ್ಲಿಂದ ಬಂದವು ಎಂಬ ಪ್ರಶ್ನೆ ಎದುರಾಗುತ್ತದೆ. ಚೆಕ್ ಕೊಟ್ಟಿದ್ದು ಯಾರು ಎಂದು ತಿಳಿಯುವುದು ವಿಶಾಲನಿಗೆ ಕಷ್ಟವೇನಲ್ಲ. ನಾನು ವಿಶಾಲನನ್ನು ನಂಬಬಹುದೇ?

ಇಲ್ಲ, ವಿಶಾಲನ ಸಂಪೂರ್ಣ ಪರಿಚಯ ನನಗಿಲ್ಲ. ನಾನು ಇವನಿಗೆ ಏನೂ ಹೇಳುವುದಿಲ್ಲ. ಚೆಕ್ಕನ್ನು ಅಮ್ಮನಿಗೆ ಕಳುಹಿಸುತ್ತೇನೆ. ಭೂಪಾಲ್‌ನ ಬ್ಯಾಂಕಿನಲ್ಲೂ ನನ್ನ ಖಾತೆ ಇದೆ. ಆ ಖಾತೆಯನ್ನು ನನ್ನ ಬಾಲ್ಯದಲ್ಲಿಯೇ ಅಮ್ಮ ತೆರೆದಿದ್ದರು. ಆ ಖಾತೆ ಮುಚ್ಚಬಾರದೆಂದು ಅಮ್ಮ ಆಗಿಂದಾಗ್ಗೆ ಅದಕ್ಕೆ ಹಣವನ್ನು ಜಮಾ ಮಾಡುತ್ತಿದ್ದರು. ಹೌದು, ಅದೇ ಖಾತೆಗೆ ಹಣ ಜಮಾವಣೆ ಮಾಡುವುದು ಒಳಿತು. ನಾನು ಹಣದ ವಿಷಯದಲ್ಲಿ ರಿತಿಕ್‌ನನ್ನು ನಂಬಿ ಕೆಟ್ಟ ಅನುಭವ ಪಡೆದಿದ್ದೆ. ಈಗ ವಿಶಾಲನನ್ನು ಇಷ್ಟು ಬೇಗನೆ ನಂಬಲು ಸಾಧ್ಯವಿರಲಿಲ್ಲ. ಆದರೆ ನಂಬಿಕೆಯ ಮಹಲ್ ಯಾವ ಇಟ್ಟಿಗೆಗಾರೆಯಿಂದ ಸಿದ್ಧವಾಗುತ್ತದೆ ಎಂದು ದೊಡ್ಡದೊಡ್ಡ ವಿದ್ವಾಂಸರೂ ಸಹ ಹೇಳಲು ಸಾಧ್ಯವಿಲ್ಲ. ಪ್ರೀತಿ ಕುರುಡು ನಂಬಿಕೆಗೆ ಕಾರಣವಾಗುವುದೋ ಅಥವಾ ನಂಬಿಕೆ ಪ್ರೀತಿಯನ್ನು ಕುರುಡು ಮಾಡುವುದೋ ಎಂಬುದನ್ನು ತಿಳಿಯುವುದು ಅಸಾಧ್ಯ.

ನಾವು ಊಟ ಮುಗಿಸಿದಾಗ ಹತ್ತು ಮುಕ್ಕಾಲು ಗಂಟೆಯಾಗಿತ್ತು.

'ಓಹ್! ತುಂಬಾ ತಡವಾಯ್ತು, ನಾನಿನ್ನು ಹೊರಡಬೇಕು' ಎನ್ನುತ್ತಾ ವಿಶಾಲ್ ಎದ್ದು ನಿಂತ.

'ಮಾತಿನ ಮಧ್ಯೆ ಸಮಯವೇ ತಿಳಿಯಲಿಲ್ಲ', ಎಂದು ಅವನ ಮಾತನ್ನು ಸಮರ್ಥಿಸಿದೆ.

'ಸರಿ, ಕಿಚಡಿಗೆ ಧನ್ಯವಾದಗಳು'

'ನಿಮಗೆ ಬರ್ಗರ್‌ಗೆ ಧನ್ಯವಾದಗಳು', ನಾನು ನಕ್ಕೆ. ವಿಶಾಲ್ ಸಹ ನಕ್ಕ. ಅವನೇ ಬಾಗಿಲು ತೆರೆದು ಹೊರಗೆ ಹೋಗುತ್ತಾ ಹೇಳಿದ, 'ಬಾಗಿಲು ಹಾಕಿಕೊಳ್ಳಿ. ಚೆನ್ನಾಗಿ ನಿದ್ರೆ ಮಾಡಿ. ಗುಡ್ ನೈಟ್'.

'ಗುಡ್ ನೈಟ್', ಅವನು ಬೈಕ್ ಸ್ಟಾರ್ಟ್ ಮಾಡುತ್ತಲೇ ಬಾಗಿಲು ಮುಚ್ಚಿದೆ.

'ಈಡಿಯಟ್' ನನಗೇಕೋ ವಿಶಾಲನ ಬಗ್ಗೆ ಸಿಟ್ಟು ಬಂತು. ಆದರೆ ನಾನೇಕೆ ಅವನ ಮೇಲೆ

